ಕೊಡುತ್ತಿಲ್ಲ, ಶಾಸನಸಭೆಯಲ್ಲಿ ನಿಯಮಗಳು ಇಲ್ಲವೇ? ರೀತಿ-ನೀತಿಗಳು ಇಲ್ಲವೇ? ಇಂತಹ ಪ್ರವೃತ್ತಿಯಲ್ಲಿ ಶಾಸನಸಭೆಯಲ್ಲಿ ನಾವು ಹೇಗೆ ಕೆಲಸ ಮಾಡುವುದಕ್ಕಾಗುತ್ತದೆ? ಒಂದು ಸಾರಿ ನಿಯಮ ಹಾಕುವವರೆಗೆ ನಾವು ಈ ಸದನಕ್ಕೆ ಬರಬೇಕೋ, ಬೇಡವೋ ಎನ್ನತಕ್ಕಂಥ ನಿರ್ಣಯ ಮಾಡುತ್ತೇವೆ. ಇವರು ಮಾತನಾಡುವುದಕ್ಕಿಂಥ ನಮ್ಮ ಹಕ್ಕನ್ನು ಕಿತ್ತುಕೊಳ್ಳುವಂಥ ಪ್ರವೃತ್ತಿಯಾದರೆ ಹೇಗೆ? ಇವರಿಗೆ ಸಂಖ್ಯೆ ಹಿಡಿಸಿದ್ದರೆ, ಆ ಸಂಖ್ಯೆಯ ಮತ್ತಿನಿಂದ ಈ ರೀತಿ ಮಾಡುತ್ತಿದ್ದಾರೆಯೇ ಈ ರಾಜ್ಯದ ಜನರ ಪರವಾಗಿ ಕೆಲಸ ಮಾಡುವುದಕ್ಕೆ ನಾವುಶಾಸನಸಭೆಗೆ ಬಂದಿದ್ದೇವೆ. ಅದಕ್ಕಾಗಿ ನಿಯಮಗಳನ್ನು ರೂಪಿಸಿಕೊಂಡಿದ್ದೇವೆ. ಇಷ್ಟೊಂದು ಎತ್ತರದ ಧ್ವನಿಯಲ್ಲಿ ಮಾತನಾಡುವುದು ಸರಿಯಲ್ಲ ಕೂಗಾಟ ಏನು? ನಾನು ನಿನ್ನೆ ಒಬ್ಬ ಹಿರಿಯ ಮಾನ್ಯ ಸದಸ್ಯರ ಮಾತನ್ನು ಕೇಳಿ ಸಹಿಸಿಕೊಂಡೆ ಅವರು 'ನಿಮ್ಮ ನಿಮ್ಮ ಕ್ಷೇತ್ರಗಳಿಗೆ ನೀವು ಹೋಗದ್ದೀರೊ ಇಲ್ಲವೋ? ಎಂದು ಹೇಳಿದರು. ಯಾರ್ಯಾರು ಯಾವ್ಯಾವ ಕ್ಷೇತ್ರಕ್ಕೆ ಹೋಗಿದ್ದಾರೆ ಅಥವಾ ಬಿಟ್ಟಿದ್ದಾರೆಯೇ ಎನ್ನುವುದನ್ನು ಇವರಿಂದ ವಿಮರ್ಶೆ ಮಾಡಿಸುವುದೇ ಆದುದರಿಂದ, ಇದರ ಬಗ್ಗೆ ಒಂದು ಸಾರಿ ನಿರ್ಣಯ ಆಗಬೇಕು. ಆ ನಿರ್ಣಯವಾಗುವವರೆಗೆ ಸದನದಲ್ಲಿ ಪಾಲ್ಗೊಳ್ಳಬೇಕೇ ಎನ್ನುವುದನ್ನು ನಾವೆಲ್ಲಾ ಒಟ್ಟುಗೂಡಿ ಮಾತನಾಡುತ್ತೇವೆ. ಅಲ್ಲಿಯವರೆವಿಗೂ ಈ ಪ್ರವೃತ್ತಿಯಲ್ಲಿ ನಾವು ಕೆಲಸ ಮಾಡುವುದಕ್ಕೆ ಸಿದ್ಧರಿಲ್ಲ. ಆದುದರಿಂದ, ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಸಂದರ್ಭದಲ್ಲಿ ವಿರೋಧಪಕ್ಷದ ನಾಯಕರಾದ ಶ್ರೀ ಡಿ.ಬಿ. ಚಂದ್ರೇಗೌಡರು, ಸದಸ್ಯರುಗಳಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಶ್ರೀ ಬಸವರಾಜ ರಾಯರೆಡ್ಡಿ,ಶ್ರೀ ಬಿ.ಎಚ್. ಬನ್ನಿಕೋಡ್ ಮತ್ತು ಶ್ರೀ ಶಿವಾನಂದ ಹೆಚ್ ಕೌಜಲಗಿಯವರು ಸಭಾತ್ಯಾಗ ಮಾಡಿದರು.)

(ಗೊಂದಲ)

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷೀಣಿಯವರೇ, ಇವೊತ್ತು ಈ ಸದನದಲ್ಲಿ ಒಂದು ಘಟನೆ ನಡೆದಿದೆ. ಮಾನ್ಯ ಸಭಾಧ್ಯಕ್ಷರಾಗಿರತಕ್ಕಂಥವರು, ನಿಯಮಾವಳಿ ಪ್ರಕಾರ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸದೇ ಇದ್ದರೆ ನಾನು ಇಲ್ಲಿ ಕುಳಿತುಕೊಳ್ಳುವುದಿಲ್ಲ, ನಿವೃತ್ತಿಯಾಗುವುದಕ್ಕೆ ಅವಕಾಶ ಮಾಡಿಕೊಡಿ ಎನ್ನತಕ್ಕಂಥ ವಿಷಯವನ್ನು ಸದನದ ಮುಂದಿಟ್ಟರು. ನಾವೆಲ್ಲರೂ ಕೂಡ ಸರ್ಕಾರದ ಕಡೆಯಿಂದ ಮತ್ತು ಈ ಕಡೆಯಿಂದ ಅಧ್ಯಕ್ಷರಿಗೆ ಆಶ್ವಾಸನೆ ಕೊಟ್ಟಿದ್ದೇವೆ. ನಾವು ನಿಯಮಾವಳಿ ಪ್ರಕಾರ ನಡೆದುಕೊಳ್ಳುತ್ತೇವೆ. ನಿಮ್ಮ ಎಲ್ಲಾ ರೀತಿಯಾದಂಥ ಸಹಕಾರ ಕೊಡುತ್ತೇವೆ ಎನ್ನತಕ್ಕಂಥ ಆಶ್ವಾಸನೆ ಕೊಟ್ಟು ಇನ್ನೂ ಒಂದು ಗಂಟೆಯಾಗಿಲ್ಲ ಆಗಲೇ ಈ ರೀತಿ ನಡೆದುಕೊಳ್ಳುತ್ತಿದ್ದೇವೆ. ಮಾನ್ಯಶ್ರೀ ಯಡಿಯೂರಪ್ಪನವರು ಒಂದು ಪಕ್ಷದಿಂದ ಗೆದ್ದು ಬಂದಿದ್ದಾರೆ. ಅವರು ಜನತೆಯ ಮುಂದೆ ಹೋಗಿ ನಾವು ಈ ರೀತಿ ಮಾಡುತ್ತೇವೆಂದು ಹೇಳಿದ್ದಾರೆ. ಅವರಿಗೆ ಇಲ್ಲಿ ಮಾತನಾಡತಕ್ಕಂಥ ಹಕ್ಕಿದೆ. ಅವರು ಅನ್‌ಪಾರ್ಲಿಮೆಂಟರಿಯಾಗಿರತಕ್ಕಂಥ ಯಾವುದಾದರೂ ಪದವನ್ನು ಉಪಯೋಗಿಸಿದ್ದರೆ, ಅದನ್ನು ನಿಯಾಮಾವಳಿ ಪ್ರಕಾರ ನಿಯಂತ್ರಿಸುವುದಕ್ಕೆ ತಾವು ಇದ್ದೀರಿ. ಅನ್‌ಪಾರ್ಲಿಮೆಂಟರಿಯಾಗಿ ಅವರೇನೂ ಮಾತನಾಡಲಿಲ್ಲ. ಅವರು ಹೇಳಬೇಕಾಗಿರುವುದನ್ನು ಹೇಳುವುದಕ್ಕೂ ಕೂಡ ಇಲ್ಲಿ ಅವಕಾಶ ಇಲ್ಲದಿದ್ದರೆ ಇನ್ನೆಲ್ಲಿ ಹೋಗಿ ಹೇಳಬೇಕು? ಈ ರೀತಿ ಭಾಷಣ ಮಾಡುತ್ತಿರುವಾಗ ಪದೇ